ವಿದ್ಯಾರ್ಥಿಯ ಬೌದ್ಧಿಕ ಔನ್ನತ್ಯಕ್ಕೆ ಅನಂತ ಅವಕಾಶಗಳನ್ನು ತೆರೆದಿಡುವುದರ ಜೊತೆಗೆ ನಮ್ಮ ಭಾಷೆ, ಸಂಸ್ಕೃತಿ, ಸಂಪ್ರದಾಯಗಳನ್ನು ಗೌರವಿಸುವ ಹೃದಯ ಶ್ರೀಮಂತಿಕೆಯ ಸಂಸ್ಕಾರವು ವಿದ್ಯಾರ್ಥಿಗಳಲ್ಲಿ ಮೈಗೂಡಬೇಕೆಂಬುದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಪ್ರಮುಖ ಧ್ಯೇಯ. ಇಲ್ಲಿ ಶಿಕ್ಷಣಕ್ಕೆ ಸಮಾನಾಂತರವಾದ ಪ್ರಾತಿನಿಧ್ಯವನ್ನು ಭಾಷೆ, ಕಲೆ, ಸಾಹಿತ್ಯ, ಸಂಸ್ಕೃತಿ, ಕ್ರೀಡೆಗೆ ನೀಡಲಾಗುತ್ತಿದೆ. ಇಲ್ಲಿನ ವಿದ್ಯಾರ್ಥಿಗಳು ಶೈಕ್ಷಣಿಕ ಕ್ಷೇತ್ರದಲ್ಲಿ ಅತ್ಯುನ್ನತ ಸಾಧನೆಗಳೊಂದಿಗೆ ಮಿಂಚಿದರೆ, ಕ್ರೀಡಾ ಕ್ಷೇತ್ರದಲ್ಲಿ ಅದ್ಭುತ ದಾಖಲೆಗಳನ್ನು ಬರೆಯುವ ಮೂಲಕ ರಾಷ್ಟ್ರ- ಅಂತರಾಷ್ಟ್ರೀಯ ಮಟ್ಟದಲ್ಲಿ ಮಿಂಚುತ್ತಿದ್ದಾರೆ. ಇನ್ನು ಸಾಂಸ್ಕೃತಿಕ ಲೋಕಕ್ಕೆ ಅತಿದೊಡ್ಡ ಕೊಡುಗೆಯನ್ನು ನೀಡುತ್ತಿರುವ ಆಳ್ವಾಸ್ ತನ್ನ ವಿದ್ಯಾರ್ಥಿಗಳನ್ನು ವೃತ್ತಿಪರ ಕಲಾವಿದರಾಗಿಸುವಲ್ಲಿ ಹಿಂದೆ ಬಿದ್ದಿಲ್ಲ. ಪ್ರತಿಷ್ಠಾನವು ಸಾಂಸ್ಕೃತಿಕ ದತ್ತುಸ್ವೀಕಾರದ ಅಡಿಯಲ್ಲಿ ನೂರಾರು ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡುತ್ತಿದೆ. ಹೀಗೆ ಸಂಪೂರ್ಣ ಉಚಿತ ಶಿಕ್ಷಣದ ಅವಕಾಶ ಪಡೆದ ವಿದ್ಯಾರ್ಥಿಗಳು ವಿವಿಧ ಬಗೆಯ ನೃತ್ಯಗಳು-ಸಂಗೀತ-ನಾಟಕ-ಯಕ್ಷಗಾನ-ಪಕ್ಕವಾದ್ಯ ಸೇರಿದಂತೆ ಅನೇಕ ಕಲಾ ಪ್ರಕಾರಗಳಲ್ಲಿ ಆಯಾ ಕ್ಷೇತ್ರದ ಹೆಸರಾಂತ ತರಬೇತಿದಾರರ ಕೈಕೆಳಗೆ ಪಳಗಿ ವೃತ್ತಿನಿರತ ಕಲಾವಿದರಿಗೆ ಪೈಪೋಟಿ ನೀಡುವಷ್ಟು ಪ್ರಬುದ್ಧತೆಯನ್ನು ಪಡೆದುಕೊಳ್ಳುತ್ತಿದ್ದಾರೆ. ಸಾಂಸ್ಕೃತಿಕ ತಂಡಗಳಲ್ಲಿ ನೇರವಾಗಿ ಭಾಗಿಯಾಗದ ವಿದ್ಯಾರ್ಥಿಗಳು ವರ್ಷಾದ್ಯಂತ ನಡೆಯುವ ವಿವಿಧ ಸಾಂಪ್ರದಾಯಿಕ, ಸಾಂಸ್ಕೃತಿಕ ಕಾರ್ಯಕ್ರಮಗಳ ಒಡನಾಟದಿಂದ ತಮ್ಮ ವ್ಯಕ್ತಿತ್ವವನ್ನು ವಿಕಸಿಸಿಕೊಳ್ಳುತ್ತಿದ್ದಾರೆ. ಇಂಥಾ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಶಿಖರಪ್ರಾಯವಾದ ವಾರ್ಷಿಕ ಬೃಹತ್ ಉತ್ಸವಗಳೇ ಆಳ್ವಾಸ್ ನುಡಿಸಿರಿ ಹಾಗೂ ಆಳ್ವಾಸ್ ವಿರಾಸತ್.

## ಆಳ್ವಾಸ್ ನುಡಿಸಿರಿ

ಕನ್ನಡ ಭಾಷೆ-ಸಂಸ್ಕೃತಿಯ ಬಳಕೆ, ಬೆಳವಣಿಗೆ, ಪ್ರಸರಣಕ್ಕೆ ಸಂಬಂಧಿಸಿದ ಬಹುದೊಡ್ಡ ಸಮ್ಮೇಳನವಿದು. ಕನ್ನಡ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕಾರ್ಯ ಕೇವಲ ಸರಕಾರದ್ದಲ್ಲ; ಒಬ್ಬ ಶ್ರೀಸಾಮಾನ್ಯ ಕೂಡ ಆ ಕೆಲಸವನ್ನು ಕಂಕಣಬದ್ಧನಾಗಿ ಮಾಡಬಲ್ಲ, ಸುಂದರ 'ಕನ್ನಡ ಮನಸು'ಗಳನ್ನು ಕಟ್ಟಬಲ್ಲ ಎಂಬುದಕ್ಕೆ ಸಾಕ್ಷಿ ಈ ಆಳ್ವಾಸ್ ನುಡಿಸಿರಿ. 2003ರಲ್ಲಿ ಡಾ.ಕಮಲಾ ಹಂಪನಾ ಅಧ್ಯಕ್ಷತೆಯಲ್ಲಿ ಮೂಡುಬಿದಿರೆಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವೇ ಇದಕ್ಕೆ ನಾಂದಿ. ಕನ್ನಡದ ಕೆಲಸ ಸರಕಾರದ, ಪರಿಷತ್ತಿನ ಕೆಲಸ ಮಾತ್ರವಾಗದೆ ಎಲ್ಲರ ಕೆಲಸವೂ ಹೌದು ಎನ್ನುವುದನ್ನು ಸಾಧಿಸಿ ತೋರಿಸಲು ಹೊರಟ ಕನ್ನಡ ಭಾಷೆ-ಸಾಹಿತ್ಯ-ಸಂಸ್ಕೃತಿಯ ರಾಷ್ಟ್ರೀಯ ಸಮ್ಮೇಳನವಿದು. 3 ದಿನಗಳ ಕಾಲ ನಡೆಯುವ ಆಳ್ವಾಸ್ ನುಡಿಸಿರಿ ಸಮ್ಮೇಳನವು ಮಾದರಿ ಸಮ್ಮೇಳನವಾಗಿ ಹೆಸರುವಾಸಿಯಾಗಿದೆ. ಸಮ್ಮೇಳನದ ಸಮಯ ಪರಿಪಾಲನೆ, ಶಿಸ್ತು, ಅಚ್ಚುಕಟ್ಟುತನಗಳು ಇನ್ನಿಲ್ಲದಂತೆ ಜನಮೆಚ್ಚುಗೆ ಪಡೆದಿದೆ. 2004ರಿಂದ ಪ್ರಾರಂಭವಾದ ಆಳ್ವಾಸ್ ನುಡಿಸಿರಿ ಸಮ್ಮೇಳನವು ಪ್ರತೀ ವರ್ಷವು ಅನೂಚಾನವಾಗಿ ನಡೆದುಕೊಂಡು ಬರುತ್ತಿದೆ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ವಿದ್ವಾಂಸರು, ಸಾಹಿತಿಗಳ ಸಹಕಾರ-ಸಹಾಯದಿಂದ ನುಡಿಸಿರಿ ರೂಪುಗೊಳ್ಳುತ್ತದೆ. ಸಮ್ಮೇಳನದ ಉದ್ಘಾಟಕರು, ಅಧ್ಯಕ್ಷರು ಹಾಗೂ ಸಂಪನ್ಮೂಲ ವ್ಯಕ್ತಿಗಳ ಆಯ್ಕೆ ಸಂಪೂರ್ಣ ಪ್ರಜಾಸತ್ತಾತ್ಮಕ ಮಾದರಿಯಲ್ಲಿ ನಡೆಯುತ್ತದೆ. ಸಮ್ಮೇಳನವು ಉದ್ಘಾಟನಾ



